International Journal of Kannada Research 2017; 3(2): 34-36



International Journal of Kannada Research
www.kannadajournal.com

ISSN: 2454–5813
IJSR 2017; 3(2): xxx-xxx
© 2017 IJKS
www.kannadajournal.com
Received: 09-02-2017
Accepted: 10-03-2017

**ಮಹೇಶ ಎಂ.ಟಿ**
**ಸಂಶೋಧನವಿಧ್ಯಾರ್ಥಿ**

**Correspondence**

ಡಾ.ಎಂ.ಶಂಕರ ಸಹಪ್ರಾಧ್ಯಾಪಕರು
ಹೇಮಗಂಗೋತ್ರಿ. ಹಾಸನ

# ಕುಮಾರನಿಜಗುಣರ ಬೋಳು ಬಸವನ ಬೊಂತೆ –*ಒಂದು ಅವಲೋಕನ*

**ಮಹೇಶ ಎಂ.ಟಿ.:** ಸಂಶೋಧನವಿಧ್ಯಾರ್ಥಿ.

ಮಹಾಕೃತಿಯೊಂದರ ಒಂದು ಲಕ್ಷಣವೇನೆಂದರೆ ಅದು ತನ್ನ ಜಾಡಿನಲ್ಲಿ, ತನ್ನ ಸ್ಪೂರ್ತಿಪ್ರಭಾವಲಯದಲ್ಲಿ ಇನ್ನೂ ಹತ್ತಾರು ಕವಿಪ್ರತಿಭೆಗಳು ನಡೆಯುವಂತೆ ಮಾಡುವುದಾಗಿದೆ. ಈ ಮಾತಿಗೆ ಮಾನ್ಯ ಡಿ.ವಿ.ಗುಂಡಪ್ಪನವರ ಮಹಾಕೃತಿ ಮಂಕುತಿಮ್ಮನಕಗ್ಗವೇ ಸಾಕ್ಷಿ. *ಕನ್ನಡದಭಗವದ್ಗೀತೆ* ಎಂದೇ ಖ್ಯಾತಿಯಾದ ಈ ಕೃತಿಯನ್ನು ಅನುಕರಿಸಿದವರೆಷ್ಟು ಹೆಚ್ಚಾಗಿರುವರೋ, ಅನುಸರಿಸಿ ಗೆದ್ದವರು ಅಷ್ಟು ಜನರಿಲ್ಲ. ಇಂತಹ ವಿರಳರಲ್ಲಿ ಕವಿ ಕುಮಾರನಿಜಗುಣರು ಪ್ರಮುಖರು. ಪ್ರಸ್ತುತ ಕುಮಾರನಿಜಗುಣರು ರಚಿಸಿರುವ *ಬೋಳುಬಸವನಬೊಂತೆ* ಎಂಬುದು ಮಾನ್ಯ ಡಿ.ವಿ.ಜಿ ಯವರ *ಮಂಕುತಿಮ್ಮನಕಗ್ಗದ* ಅನುಸರಣಾಕಾವ್ಯ. ಕಾವ್ಯ ಲಕ್ಷಣಗಳ ಮೂಲಭೂತಾಂಶಗಳನ್ನೆಲ್ಲಾ ಮೈಗೂಡಿಸಿಕೊಂಡು ಅನುಭವಪ್ರಾಮಣ್ಯ ಹೊಂದಿರುವ ಒಂದು ಅದ್ಭುತ ರಚನೆ. ಡಿ.ವಿ.ಜಿಯವರ ಮಂಕುತಿಮ್ಮನಕಗ್ಗವು ವೇಮನ, ಸರ್ವಜ್ಞರಂತಹ ಪೂರ್ವಸೂರಿಗಳ ಪ್ರೇರಣೆಯನ್ನು ಹೊಂದಿದ್ದರೂ ಅದರಲ್ಲಿ ಪಾಶ್ಚಾತ್ಯ–ಪೌರಸ್ತ್ಯ ತತ್ತ್ವಕಲೆ, ಜೀವನಗಳ ಗಾಢಾನುಭವ, ಧ್ವನಿಬಂಧುರ ಕಾವ್ಯಪ್ರಜ್ಞೆಯು ಮೇಳೈವಿಸಿದ್ದು, ನೀತಿ ಕಾವ್ಯಕ್ಕಿಂತಲೂ ಮೀಗಿಲಾಗಿದ್ದು ಜೀವನಸೌಂದರ್ಯದರ್ಶನಕಾವ್ಯ ಎಂದೇ ಹೆಸರುವಾಸಿಯಾಗಿದೆ. ಕುಮಾರನಿಜಗುಣರ ಬೋಳುಬಸವನಬೊಂತೆಯಲ್ಲಿ ಸರ್ವಜ್ಞರಂತಹ ನೀತಿಪ್ರಧಾನ ಕವಿಗಳ ಆವೇಶದ, ಅನುಭಾವಗಳ ಮಾರ್ಗವಲ್ಲದೇ ಅವಧಾನಪೂರ್ವಕವಾದ ಕಾವ್ಯಶಿಲ್ಪಿ ನಿರ್ಮಿತಿಯೂ ಇರುವುದರಿಂದಲೇ ಇದನ್ನು ಡಿ.ವಿ.ಜಿ ಯ'ವರ ಕೃತಿಯ ಬೆಳಕಿನಲ್ಲಿ ಅವಲೋಕಿಸಬೇಕಾಗಿದೆ.

*ಮಂಕುತಿಮ್ಮನಕಗ್ಗ ಕನ್ನಡದಭಗವದ್ಗೀತೆ* ಎಂದು ಪ್ರಖ್ಯಾತಿಯಾದ ಇದು ೧೯೪೩ ರಲ್ಲಿ ರಚಿತವಾದ ಮಾನ್ಯ ಡಿ.ವಿ. ಗುಂಡಪ್ಪನವರ ಮೇರುಕೃತಿ. ವ್ಯಕ್ತಿಯ ಮತ್ತು ಸಮಾಜದ ಜೀವನೋತ್ಸಾಹ ಮತ್ತು ಜೀವನೋತ್ಕರ್ಷವನ್ನೇ ಮುಖ್ಯಸಿದ್ಧಾಂತವಾಗಿಟ್ಟುಕೊಂಡು ರಚನೆಯಾದ ಈ ಕಗ್ಗದಲ್ಲಿ ಜನಸಾಮಾನ್ಯರು ಸಮಾಜದಲ್ಲಿ ಹೇಗೆ ಬದುಕಬೇಕು, ಬದುಕಿನಲ್ಲಿ ಯಾವುದು ಒಳಿತು ಯಾವುದು ಕೆಡಕು ಯಾವ ಉದ್ದೇಶವನ್ನಿಟ್ಟುಕೊಂಡು ಬದುಕುತ್ತಿದ್ದೇವೆ, ಇಟ್ಟುಕೊಂಡಿರುವ ಉದ್ದೇಶವನ್ನು ಯಾವ ತಳಹದಿಯ ಮೇಲೆ ನಿರ್ಣಯಿಸಬೇಕು ಮುಂತಾದ ನೈತಿಕ ಮತ್ತು ಸಾ'ಮಾಜಿಕ ಮೌಲ್ಯಗಳನ್ನು ಡಿ,ವಿ.ಜಿ ಯವರು ಬಹಳ ಅದ್ಭುತವಾಗಿ ಅನಾವರಣಗೊಳಿಸಿದ್ದಾರೆ. ಇಂತಹದ್ದೇ ಉದ್ದೇಶಗಳನ್ನು ಮೌಲ್ಯಗಳನ್ನು ಇಟ್ಟುಕೊಂಡು ಇದೇ ದಾಟಿಯಲ್ಲಿ ಕುಮಾರನಿಜಗುಣರು *ಬೋಳುಬಸವನಬೊಂತೆ* ಎಂಬ ಕವನಸಂಕಲನವನ್ನು ರಚಿಸಿದ್ದಾರೆ. ಆದರೆ ಕೆಲವೊಂದು ಸನ್ನಿವೇಶಗಳಲ್ಲಿ ಈ ಎರಡು ಕೃತಿಗಳಿಗೂ ಹೋಲಿಕೆ ಕಂಡುಬಂದರೆ ಕೆಲವೊಂದು ಕಡೆ ಭಿನ್ನವಾಗಿದೆ. ನಿರೂಪಣಾಶೈಲಿ, ಗೇಯತೆ, ಗಣ,ಪ್ರಾಸ, ಮಾತ್ರಾಗತಿ ಹೀಗೆ ಹಲವು ಛಂದೋನಿಯಮಗಳಿವೆ.'

ಇದೊಂದು ಅನುಸರಣಾಕಾವ್ಯವೆಂದು ಹೀಗಳೆಯಬೇಡಿ. ಇಲ್ಲಿರುವ ಸೌಂದರ್ಯಸಂಗ್ರಹ, ರಸಸಂಸ್ಮರಣ ಹಾಗೂ ಕೃತಿಸ್ವರೂಪದ ಗುಣಗ್ರಹಣ ವಿಧಾನವನ್ನ ಪರಿಗಣಿಸಿ, ಆಶೀರ್ವದಿಸಿ ಎಂದು ಕುಮಾರನಿಜಗುಣರೇ ತಮ್ಮ ಕವನದಲ್ಲಿ ಹೇಳಿದ್ದಾರೆ.

‘ಸುಳಿದಿರ್ದರೊಂದೆರೆಡು ಪರಕೃತಿಯ ಭಾವಗಳು
ಹಳಿಯದಿರು ಬರಿದೆ ಕೃತಿಚೌರ್ಯವೆಂದು

ಅಲರ ಮಕರಂದದಿಂ ಜೇನು ತಾನಾದೊಡಂ
ತಿಳಿಯಲದೆ ಜೇನಲ್ಲ–ಬೋಳುಬಸವ.'

(ಬೋ.ಬ.ಬೋ.ಪೀಠಿಕೆ ಪದ್ಯ–೧೧)

ಕುಮಾರನಿಜಗುಣರ ಬೋಳುಬಸವನಬೊಂತೆಯು *ಜಗತ್ತು–ಜೀವ–ಈಶ್ವರ* ಎಂಬ ಮೂರು ಮೂಲಭೂತತತ್ತ್ವಗಳನ್ನ ಅವಧರಿಸಿ ರಚನೆಯಾಗಿದೆ. ಆಧ್ಯಾತ್ಮ, ಲೋಕಶಿಕ್ಷೆ, ಜೀವನಾನುಭವ ಮತ್ತು ಸೌಂದರ್ಯ ಸಂವೇಧನೆಗಳು ಇಲ್ಲಿ ಕಾವ್ಯತ್ಮಕವಾಗಿ ಮೇಳೈಸಿವೆ. ಇಲ್ಲಿ ಶುದ್ಧೋಪದೇಶ, ಸೂಚ್ಯೋಪದೇಶ ಮತ್ತು ಸ್ಫುರಣೋದೇಶಗಳು ಕಂಡುಬರುತ್ತವೆ. ಮುಖ್ಯವಾಗಿ *ಮನನಕಾವ್ಯ* ವೆಂಬ ಜಾತಿಗೆ ಸೇರಬಹುದಾದ ಬೊಂತೆಯು ಇದಕ್ಕೆ ಯೋಗ್ಯವಾದ ರೀತಿಯಲ್ಲಿ ನಾಟುನುಡಿಯಂತೆ ವರ್ತಿಸುತ್ತ ಸಾಗುತ್ತದೆ. ತಿಳಿಯಾದ ನಡುಗನ್ನಡದಲ್ಲಿ ಸಾಗುವ ಈ ಕೃತಿಯು ಬಹುಮಟ್ಟಿಗೆ ಶಿಷ್ಟಭಾಷೆಯ ಪರಿಧಿಯೊಳಗೆ ಸಾಗುತ್ತದೆ. ಸುಗಮವಾದ ಸಂಸ್ಕೃತಪದಗಳು, ಸರಳವಾದ ಅಚ್ಚಗನ್ನಡಪದಗಳು, ಹದವರಿತ ತದ್ಭವಗಳು ಇಲ್ಲಿ ಮೇಳೈಸಿವೆ. ಬೊಂತೆಯ ಮತ್ತೊಂದು ಬಂಧವಿಶೇಷತೆಯೆಂದರೆ ಇಲ್ಲಿಯ ಪ್ರಾಸನಿರ್ವಹಣೆ. ಮಂಕುತಿಮ್ಮನಕಗ್ಗಕ್ಕಿಂತಲೂ ಇಲ್ಲಿ ದ್ವಿತೀಯಾಕ್ಷರಪ್ರಾಸ, ಆದಿಪ್ರಾಸ ಬಹಳ ಕಟ್ಟುನಿಟ್ಟಾಗಿಯೇ ಬಂದಿದೆ. ಅಲ್ಲಲ್ಲಿ ದೃಷ್ಟಾಂತ ಕಥೆಗಳ, ಪೂರ್ವಪ್ರಸಿದ್ಧಸೂಕ್ತಿಗಳ ಅನುವಾದವನ್ನು ಮಾಡಿಕೊಂಡು ಸಾಗುತ್ತ, ಮಾರ್ಗ ಮತ್ತು ದೇಶಿಗಳ ಸಾಮರಸ್ಯ ಯತ್ನವನ್ನೊಂದಿದೆ. ವಸ್ತು,ಶಬ್ದಾರ್ಥ, ಶರೀರ, ಭಾಷಾಪ್ರಯೋಗ, ಛಂದೋವ್ಯಾಪಾರ ಮತ್ತು ಶಬ್ದಾರ್ಥಲಂಕಾರಗಳೆಲ್ಲಾ ಪರಂಪರೆಯ ಉತ್ತಮ ಸತ್ವಗಳನ್ನೊಂದಿದ್ದು ಗಟ್ಟಿಯಾದ ಬುನಾದಿಯ ಮೇಲೆ ನಿಂತ *ಸಮರಸತಂತ್ರ* ವಾದ ಕೃತಿ.

ಇಲ್ಲಿ *ಬೊಂತೆ* ಎಂದರೆ *ಸಾವಿರಸೊಲ್ಲುಗಳ ಸುಂದರಕಟ್ಟು* ಎಂದರ್ಥ. ಇಲ್ಲಿ ಒಂದುಸಾವಿರ ಕನ್ನಡ ಚೌಪದಿಗಳಿವೆ. *ಶ್ರೀ ತೋಂಟದ ಸಿದ್ಧಲಿಂಗೇಶ್ವರರ* ಶಿಷ್ಯರಾದ ಮಹಾನುಭಾವಿ *ಶ್ರೀ ಬೋಳುಬಸವಾರ್ಯರ* ಸ್ಮರಣಾರ್ಥವಾಗಿ ಕುಮಾರನಿಜಗುಣರ ಪ್ರತಿ ಪದ್ಯವೂ *ಬೊಳುಬಸವ* ಎಂಬ ಅಂಕಿತದಲ್ಲಿ ಮುಗಿಯುತ್ತದೆ. ಒಂದೊಂದು ಪದ್ಯದಲ್ಲಿ ತೀವ್ರವಾದ ಸಂವೇದನೆ ಜನರಿಗೆ ಹಿತವೆನಿಸುವ ಕಳಕಳಿಯು ಎದ್ದು ಕಾಣುತ್ತದೆ. ಈ ಪದ್ಯಗಳು ಹಾಡುವುದಕ್ಕೂ, ನೆನಪಿಡುವುದಕ್ಕೂ ಅನುಕೂಲಕರವಾಗಿದ್ದು, ಲಲಿತವಾದ ಧಾಟಿ ಓದುಗರ ಮನಸೆಳೆಯುತ್ತದೆ.

'ಆಂತರಿಕದನಿಸಿಕೆಯ ಅನುಭವಕೆ ಒರೆಹಚ್ಚಿ
ಪಿಂತೆ ಡಿ.ವಿ.ಜಿ.ಯು ಪೇಳ್ದ ಧಾಟಿಯಲ್ಲಿ
ಬೊಂತೆಯಂಕಿತವಿಟ್ಟು ಬರವನೀ ಕಂತೆಯನು
ಸಂತಸದಿ ಸವಿಯೆ ಜನ–ಬೋಳುಬಸವ'.

(ಬೋ.ಬ.ಬೊ.ಪೀಠಿಕೆ ಪದ್ಯ–೯)

ಈ ಗ್ರಂಥವು ಒಂದು ದರ್ಶನಕಾವ್ಯವಾಗಿದ್ದು, ದೈವದೊಲುಮೆ, ಕರ್ಮವಾದ, ಜಾತಿವಾದ, ಲೋಕಾನುಭವ, ಬದುಕು, ಕವಿ–ಕಾವ್ಯಗಳಿಂದ ಹಿಡಿದು ವಿರತಿ, ಆತ್ಮಾನುಭವಗಳವರೆಗೆ ವಿಸ್ತರಿಸಿದೆ. ನೀತಿಶಾಸ್ತ್ರ, ಧರ್ಮಶಾಸ್ತ್ರ ಮತ್ತು ಆಧ್ಯಾತ್ಮಶಾಸ್ತ್ರಗಳ ಸಾರಗಳನ್ನೊಂದಿದೆಯಲ್ಲದೆ ಸುಮಾರು ೨೦ ರ ದಶಕದಲ್ಲಿ ನಮ್ಮದೇಶದಲ್ಲಿ ಎದುರಾಗಿದ್ದ ತುರ್ತುಪರಿಸ್ಥಿತಿಯ ಸಂದರ್ಭಗಳು ಈ ಬೊಂತೆಯ ಹಂದರದಲ್ಲಿವೆ.

'ತ್ವರಿತದಿಂ ಬಡತನವನೋಡಿಸುವ ನೆಪಹೇಳಿ
ಗುರುತರದ ನಾಯಕರ ಸೆರೆಯೊಳಿಟ್ಟು
ಮರಣಪರ್ಯಂತ ನಾ ಬಿಡೆನು ಪದವಿಯನೆಂದು
ಮೆರೆವವರ ಕೆಳಗಿಳಿಸು–ಬೋಳುಬಸವ'.

(ಬೋ.ಬ.ಬೊ.ತುರ್ತುಪರಿಸ್ಥಿತಿ ಪದ್ಯ–೯೬೬)

ತಾನು ನಂಬಿದ ನೀತಿ ನಡವಳಿಕೆಗಳಲ್ಲಿ ನಿಶ್ಚಿತವಾದ ನಿಲುವಿಲ್ಲದಿದ್ದರೆ ಅವುಗಳ ಮೌಲ್ಯ ಕುಸಿಯುತ್ತದೆ. ನೀತಿ ನಿಯಮಗಳು ಆಚರಣೆಗೆ ಅಹಿತವೆನಿಸಿದರೂ ಸತ್ಯವಾದವು. ಕವಿಗೆ ಉತ್ಸಾಹವಿದ್ದರೂ ಸತತ ಪ್ರಯತ್ನವಿಲ್ಲದೆ ಕೀರ್ತಿ ದೊರಕಲಾಗದು. ಪ್ರಯತ್ನದ ಜೊತೆಗೆ ಕೌಶಲವು ಬೇಕು. ಜೊತೆಗೆ ಎಂತಹ ಉತ್ತಮ ಕವಿಯಾದರೂ ಅತನ ಕಾವ್ಯ ರಸಮಯವಾಗಬೇಕಾದರೆ ದೈವದೊಲಮೆ ಬೇಕೆನ್ನುತ್ತಾನೆ ಬೋಳುಬಸವ. ದೈವದ ಅನುಗ್ರಹವಿದ್ದರೆ ಎಂತಹ ಕಷ್ಟವೂ ದೂರವಾಗುತ್ತದೆ.

'ದೇವನೊಲಿದೊಡೆ ಜಗದಿ ಶೂಲಮುಂ ಮಾಲೆಯ್ಕೆ
ಬೇವುಸಹ ಬೆಲ್ಲದಂತಿನಿದಪ್ಪುದು
ಹಾವು ಬರೆ ಮೈ ಬೆವರಿ ನೀಂ ನಡುಗಬೇಕಿಲ್ಲ
ಹಾವು ಹೂವಾಗುವುದು–ಬೋಳುಬಸವ'.

(ಬೋ.ಬ.ಬೊ.ದೈವದೊಲುಮೆ ಪದ್ಯ–೫೦)

ನಮ್ಮೀ ಭಾರತದೇಶದಲ್ಲಿ ಸಾವಿರಾರು ಜಾತಿಗಳು, ಒಳಪಂಗಡಗಳು ಇವೆ. ಇವೆಲ್ಲಾ ತೊಲಗದ ಹೊರತು ದೇಶವು ಉದ್ಧಾರವಾಗುವುದಿಲ್ಲವೆಂದು ಹೇಳತಕ್ಕವರಿದ್ದಾರೆ. ಜಾತಿಮತಚಿಹ್ನೆಗಳನ್ನೂ ಸಹ ಯಾರೂ ಧರಿಸದಂತೆ ಶಾಸನವನ್ನ ಮಾಡಬೇಕೆಂದು ಕೆಲವರು ಹೇಳಿದ್ದುಂಟು. ಆದರೆ ಜಾತಿಮತಗಳನ್ನ ತೊಡೆದುಹಾಕಬಹುದೆಂಬುದೇ ಒಂದು ಭ್ರಾಂತಿ. ಜಗತ್ತಿನಲ್ಲಿ ಜಾತಿಮತಗಳನ್ನ ತೊಡೆದು ಹಾಕುವುದು ಯಾರಿಂದಲೂ ಸಾಧ್ಯವಿಲ್ಲ. ಜಾತಿಯನ್ನಳಿಸುತ್ತೇವೆಂದು ಹೊರಟು ಹೊಸ ಜಾತಿಯನ್ನೆ ನಿರ್ಮಿಸುತ್ತಾರೆ. ಜಾತಿಯ ವಿಷಯವಾಗಿ ಮಾತಾನಾಡಿಕೊಳ್ಳುವುದೇ ಈ ಜಾತಿವಾದಕ್ಕೆ ಪೋಷಕವಾಗುತ್ತದೆಂದು ಕುಮಾರನಿಜಗುಣರು ತಮ್ಮ ಬೊಂತೆಯಲ್ಲಿ ಪ್ರಸ್ತಾಪಿಸಿದ್ದಾರೆ.

'ಜಾತಿಮತಕುಲಧರ್ಮದಾಚರಣೆಯಿರಲೇನು
ಜಾತಿವೈಷಮ್ಯವಿಷವಿಲ್ಲದಿರಲು
ಜಾತಿಯಳಿಸುವ ಭ್ರಾಂತಿ ಜಾತಿವಾದದ ಬೆಳೆಗೆ
ಜಾತಿರಸಗೊಬ್ಬರವು– ಬೋಳುಬಸವ'.

(ಬೋ.ಬ.ಬೊ.ಜಾತಿವಾದ ಪದ್ಯ–೩೯೧

ಹೀಗೆ ಈ ಕೃತಿಯಲ್ಲಿ ಚಿಂತನವಿದೆ, ಸಾಮಾಜಿಕ ಕಾಳಜಿಯಿದೆ, ಅವಲೋಕನವಿದೆ, ಬೆರಗಿನದೃಷ್ಟಿಯಿದೆ, ಉದಾರಹಣೆಯಿದೆ, ನಿತ್ಯಜೀವನದ ಹೊಳಹು ಇದೆ, ವಿಡಂಬನೆ ಆಕ್ರೋಶವಿದೆ, ಹಾಸ್ಯವಿದೆ, ಎಷ್ಟೋ ಸುಭಾಷಿತಗಳ ಅನುಸರಣವಿದೆ, ಕಪಟ, ವಂಚನೆ, ಮೌಢ್ಯ, ಅನ್ಯಾಯ, ಅಕ್ರಮಗಳ ವಿರುದ್ಧ ಆಗ್ರಹವಿದೆ. ಸದಾಚಾರ, ಸದ್ವಿಚಾರಗಳ ಬಗ್ಗೆ ಆದರದ ಆಶಯವಿದೆ. ಸಾಂಪ್ರದಾಯಿಕ ವಿಷಯ, ಮೌಲ್ಯಗಳ ಹಾಗೆಯೇ ಸಮಕಾಲೀನ ಸ್ಥಿತಿಗತಿಗಳ ಬಗ್ಗೆಯೂ ಸ್ಪಂದಿಸುವ ಹವಣು ಇಲ್ಲಿದೆ.

ಬೋಳುಬಸವನಬೊಂತೆಯು ಮೇಲ್ನೋಟಕ್ಕೆ ಒಂದು ಕೃತಿಯಂತೆ ಕಂಡರೂ, ಇದು ಈ ಸಮಾಜದಲ್ಲಿ ಹಲವಾರು ಪಾತ್ರಗಳನ್ನು ನಿರ್ವಹಿಸುತ್ತದೆ. ಇದು ಬಾಳನಿಡುದಾರಿಯಲ್ಲಿ ಗಮಿಸುತ್ತಿರುವ ಪಥಿಕನಿಗೆ ಒಂದು ದಾರಿದೀಪ, ಕವಲೊಡೆದ ದಾರಿಯಲ್ಲಿ ಕೈ

ತೋರಿಸುವ ಸಿಪಾಯಿ, ನುಡಿವಲ್ಲಿ ನಡೆವಲ್ಲಿ, ಸಂಚರಿಸುವಲ್ಲಿ, ಸಂಭಾಷಿಸುವಲ್ಲಿ ದಾಂಟಿಸುವ ಒಂದು ಸ್ನೇಹಸೇತು. ನಾನು ಹೇಳಿದಂತೆ ಕೇಳು ಸುಮ್ಮನೆ ತಲೆ ಕೆಡಿಸಿಕೊಳ್ಳಬೇಡ ಎಂದು ಧೈರ್ಯ ತುಂಬುವ ಸನ್ಮಿತ್ರ. ಪರವಾಗಿಲ್ಲ ತಪ್ಪು ಮಾಡುವುದು ಮಾನವನ ಸ್ವಭಾವ ನಿನ್ನ ದೌರ್ಬಲ್ಯಕ್ಕೆ ನಿರುತ್ಸಾಹಿಯಾಗಬೇಡ, ಮರಳಿಯತ್ನಮಾಡು ನಿನಗೆ ಸದಾ ಕ್ಷಮೆಯಿದೆ ಎಂದು ನಿರ್ಭೀತಿಯನ್ನ ಬೋಧಿಸುವ, ನಿರಂತರ ಹೋರಾಟವನ್ನ ಸೂಚಿಸುವ ದೇವಸಾನಿ. *'ನಡೆವರೆಡಹದೆ ಕುಳಿತರೆಡಹುವರೆ'* ಎಂಬ ವಾಸ್ತವವಾದಿಯಂತೆ ಸಾಂತ್ವನಬಯಸುವ ಸಂತೆ ಈ ಕಂತೆ. ನೀನು ನನ್ನನ್ನು ನಂಬು, ನನಗೆ ಶರಣಾಗು ನಿನ್ನ ಯೋಗಕ್ಷೇಮ ನನ್ನದು ಎಂದು ಹೇಳುವ ಭಾವುಕಭೈರಾಗಿ ಈ ಬೊಂತೆ.

ಈ ಬೊಂತೆಯಲ್ಲಿನ ಸಾವಿರಸೊಲ್ಲುಗಳನ್ನು ೨೪ ಪ್ರಕಾರಗಳಾಗಿ ವಿಂಗಡಿಸಿ ೧೭೨ಪುಟಗಳಲ್ಲಿ ವಿಸ್ತರಿಸಿ ಓರಣವಾಗಿ ಹೆಣೆದು ತಮ್ಮ ಅನುಭವ ಅನಿಸಿಕೆಗಳ ಅಭಿವ್ಯಕ್ತಿಯನ್ನಿಕ್ಕಿ ಓದುಗರಲ್ಲಿ ಅವಿನಾಭಾವ ಸಂಬಂಧಿಯಾಗಿ ಅರ್ಪಿಸಿಕೊಂಡಿದ್ದಾರೆ. ಕಂದವೃತ್ತಗಳಲ್ಲಿಯೇ ಹೆಚ್ಚಾಗಿ ಪದ್ಯಗಳನ್ನ ರಚಿಸುವ ಹಿಂದಣ ರೂಢಿಯನ್ನ ಬಿಟ್ಟು ಸಾಂಗತ್ಯ, ಷಟ್ಪದಿ, ದ್ವಿಪದಿ ಮೊದಲಾದ ಕನ್ನಡಕ್ಕೆ ಸ್ವಾಭಾವಿಕವಾದ ನೂತನ ಛಂದಸ್ಸುಗಳಲ್ಲಿ ಪದ್ಯ ಮತ್ತು ಕಾವ್ಯಗಳನ್ನ ರಚಿಸುವ ಮೂಲಕ ವೀರಶೈವ ಕವಿಗಳ ಸಂಪ್ರದಾಯವನ್ನೆ ಅನುಸರಿಸಿ ಹಿಂದೆ ಕ್ವಚಿತ್ತಾಗಿ ಬಳಕೆಯಲ್ಲಿದ್ದ ತ್ರಿಪದಿಯಲ್ಲಿ ತನ್ನ ವಚನಗಳನ್ನ ರಚಿಸಿ ತ್ರಿಪದಿಗೆ ಕನ್ನಡ ಸಾಹಿತ್ಯದಲ್ಲಿ ಒಂದು ಶಾಶ್ವತ ಸ್ಥಾನವನ್ನ ಕಲ್ಪಿಸಿಕೊಟ್ಟ ಸರ್ವಜ್ಞರಂತೆ ಕುಮಾರನಿಜಗುಣರು ಇಲ್ಲಿ ಚೌಪದಿಯಲ್ಲಿ ಕವನ ರಚಿಸಿ ಚೌಪದಿಗಳಿಗೂ ಸೂಕ್ತ ಸ್ಥಾನಮಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ಭಾಮಿನಿಗೆ ಕುಮಾರವ್ಯಾಸ, ರಗಳೆಗೆ ಹರಿಹರ, ಸಾಂಗತ್ಯಕ್ಕೆ ರತ್ನಾಕರವರ್ಣಿ, ತ್ರಿಪದಿಗೆ ಸರ್ವಜ್ಞರು ಇದ್ದ ಹಾಗೆ ಚೌಪದಿಗೆ ಡಿ.ವಿ.ಜಿರವರು ಹಾಗೂ ಕುಮಾರನಿಜಗುಣರು ಇದ್ದಾರೆನ್ನಬಹುದು. ಚೇಳುಗಳಿಗಿರುವ ಆರು ಕಾಲುಗಳಿಗಿಂತ ಅದರ ಒಂದು ಕೊಂಡಿ ಹೇಗೆ ಮುಖ್ಯವೋ ಹಾಗೆ ಈ ಚೌಪದಿಗಳಲ್ಲಿ ಬರುವ ಕೊನೆಯ ಮಾತು ಅನೇಕ ಸಲ ಮೇಲಿನ ಮಾತುಗಳನ್ನ ಸಮರ್ಥಿಸಿ, ವಿವೇಚಿಸಿ ತೀರ್ಪು ನೀಡುವಂತೆ ನಿಖರವಾದ, ಹರಿತವಾದ ಬಾಣದಂತಿರುವುದನ್ನ ಈ ಕೃತಿಯಲ್ಲಿ ಕಾಣಬಹುದು.

ಒಂದು ಪದ್ಯ ಸಂಸ್ಕೃತಪದದಿಂದ ಆರಂಭವಾದರೆ ಸಾಕು, ಹೂಮಾಲೆಯಲ್ಲಿನ ಒಂದು ಹೂವನ್ನಿಡಿದು ಎತ್ತಿದರೆ ಹೇಗೆ ಇಡೀ ಹೂಮಾಲೆಯೇ ಮೇಲೇಳುತ್ತದೆಯೋ ಹಾಗೆ ಅದೇ ಪದಗಳ ಸಮುದಾಯ ಸಮರಸವಾಗಿ ಮೈದೋರಿವೆ. ಸಂಸ್ಕೃತ-ಕನ್ನಡ ಪದಗಳನ್ನು ಹೇಗೆ ಬಳಕೆ ಮಾಡಬೇಂಬುದನ್ನು ಕುಮಾರನಿಜಗುಣರು ಈ ಕೃತಿಯಲ್ಲಿ ತೋರ್ಪಡಿಸಿದ್ದಾರೆ.

'ನ ವಿತ್ತೇಣ ತರ್ಪಣೀಯೋ ಮನುಷ್ಯಃ' ಎಂಬುದು ಉಪನಿಷತ್ತಿನ ಮಾತು. ಹಣದಗಳಿಕೆಯಿಂದ ಮನಿಷ್ಯ ತೃಪ್ತನಾಗಲಾರ. ಹಣದ ಗಳಿಕೆ ಬಳಕೆಯನ್ನು ಕಲಿಸದೆ ಅದರ ಉಳಿಕೆಯನ್ನು ಹಾಗು ಬೆಳವಣಿಗೆಯನ್ನು ಮಾಡಲು ಹುಚ್ಚುಹಿಡಿಸುತ್ತದೆ. ಈ ಹುಚ್ಚು ಆ ಸಿರಿ ಗೆ ತೊತ್ತಾಗುವಂತೆ, ಆ ಸಿರಿ ಗೆ ಮನವ ಮಾರಿಕೊಳ್ಳುವಂತೆ ಮಾಡಿಬಿಡುತ್ತದೆ. ಆದ್ದರಿಂದ ಸರ್ವಸುಖವನ್ನು, ಚಿರಶಾಂತಿಯನ್ನು ನೀಡಲಾರದ ಆ ಸಿರಿ ಯ ಪಾಶಕ್ಕೆ ಬಲಿಯಾಗದಿರಿ ಎಂದು ತಿಳಿಹೇಳಿದಂತಹ ರಚನೆಗಳಿವೆ.

'ಸಿರಿ' ಇಲ್ಲದೆಯೇ ಆಶ್ಚರ್ಯಕರವಾದ ಯಶಸ್ಸನ್ನು, ಪಾಂಡಿತ್ಯ, ಕಲೆ, ಕವಿತ್ವ, ನೃತ್ಯ, ಚಿತ್ರಕಲೆಗಳಿಂದ, ವಾದಿ-ವಾಗ್ಮಿಯಾಗಿ, ನ್ಯಾಯವಾದಿಯಾಗಿ, ಸಮಾಜಸುಧಾಕರನಾಗಿ, ದೀನದಲಿತರ ಸೇವೆ ಮಾಡುವುದರ ಮೂಲಕ ಪಡೆಯಬಹುದು. ಇಂತಹ ಈ ಕಲೆಗೆ ಹಣ ಸಹಾಯಕವಷ್ಟೆ. ಸಮಾಜ ಹಣವಿದ್ದವನಿಗೆ ಕೊಡುವ ಗೌರವವನ್ನು ಗುಣ, ಕಲೆ ಇದ್ದವನಿಗೆ ಕೊಡುತ್ತಿಲ್ಲ. ಅದಕ್ಕಿಂತ ಬೇರೆ ಯಾವುದನ್ನೋ ಸಂಪಾದಿಸುವುದಕ್ಕಿಂತ ಹಣವನ್ನೇ ಸಂಪಾದಿಸಿಬಿಟ್ಟರೆ ಇವೆಲ್ಲಾ ತಾನಾಗಿಯೇ ಬರುತ್ತವಲ್ಲ ಎಂದು ಜನ ಅನ್ಯಥಾ ಯೋಚನೆಮಾಡುತ್ತಾ, ಬೇರೆದಾರಿ ತುಳಿಯುವಂತೆ ಮಾಡುತ್ತದೆ. ಎನ್ನುವಂತಹ ಹಿತನುಡಿಗಳು, ಮೌಲ್ಯಗಳು ಇಲ್ಲಿವೆ.

' ಸಿರಿಗಳಿಕೆಯಿಂದೇನು ಚಿರಶಾಂತಿ ದೊರಕುವುದೆ
ಸಿರಿಯಿಂದೆ ಸರ್ವಸುಖಪಡೆಯಲಹುದೆ
ಸಿರಿಯಿರದೆಯುಂ ಯಶವ ಗಳಿಸಬಹುದುದರಿಂದೆ
ಸಿರಿಗೆ ತೊತ್ತಾಗದಿರು-ಬೋಳುಬಸವ.'
(ಬೋ.ಬ.ಬೊ. ಸಿರಿತನಬಡತನ ಪದ್ಯ ೪೨೮)

ಇಂತಹ ಪದ್ಯಗಳು ಕೆಲವೇ ಆದರೂ ಇವೆಲ್ಲಾ ಸಾಣೆಹಿಡಿದ ವಜ್ರದಂತೆ ನೇರವಾದ ನಿರೂಪಣೆಯ ಚತುರತೆಯನ್ನು ಹೊತ್ತು ಓದುಗರ ಮನವನ್ನು ಸೆರೆಹಿಡಿಯುತ್ತವೆ.

''ಮನಕೆ ತೋಚಿದ್ದನ್ನು ಎನಗೆ ತಿಳಿದಂದದೊಳು
ಜನಮನಕೆ ಸಾರುವೆನು ಇನಿಗಬ್ಬದಿ
ಜನರೊಪ್ಪಿ ಸರಿಯೆನಲಿ ಇಲ್ಲದಿರೆ ತಪ್ಪೆನಲಿ
ಮನಮೆಚ್ಚಿ ಬರೆದಿಹೆನು -ಬೋಳುಬಸವ'

ಲೋಕದಲ್ಲಿ ನೆಡೆಯುವ ನಿತ್ಯವ್ಯವಹಾರಗಳನ್ನು ನೋಡಿ, ಕೇಳಿ, ಅನುಭವಿಸಿ ಅವುಗಳ ವೈಚಿತ್ರವನ್ನು ವಿಶ್ಲೇಷಿಸಿ ಸಮಾಜದಲ್ಲಿ ನೆಡೆಯುವ ಅನ್ಯಾಯ, ಅಸಮಾನತೆ, ಮೋಸ, ಶೋಷಣೆಗಳನ್ನು ನೋಡಿ ಬಹುವಾಗಿ ನೊಂದು ದೀನದಲಿತರ ಅಸಹಾಯಕತೆ, ಅಜ್ಞಾನ, ಮೌಢ್ಯಾಚರಣೆಗಳನ್ನು ಕಂಡು ಕನಿಕರಗೊಂಡು ಸಕಲಸದ್ಗುಣ, ಮಣಿಗಳೂ, ಶಾಂತಿಧಾಮರೂ ಎನಿಸಿಕೊಂಡವರ ಅಪ್ರತಿಮ ಪ್ರಯತ್ನಗಳನ್ನು ಬಾಯಿತುಂಬ ಬಣ್ಣಿಸಿ, ಅಂಥವರನ್ನು ಸಹ ಬೊಂಬೆಗಳಂತೆ ಆಡಿಸುವ ವಿಧಿಯ ಕೈಚಳಕವನ್ನು ಎತ್ತಿತೋರಿಸಿ ಪುಂಡಪೋಕರಿಗಳ ಅಟ್ಟಹಾಸವನ್ನು ಜರಿದು, ಸಾಧುಸಜ್ಜನರು ದುರ್ಜನರ, ವಂಚಕರ ಸ್ವಾರ್ಥಿಗಳ ಕ್ರೂರ ದಬ್ಬಾಳಿಕೆಗಳಿಗೆ ಒಳಗಾಗಿ ಬಳಲುವುದನ್ನು ನೋಡಿ ದಯಾರ್ದ್ರರಾಗಿ ತಮ್ಮ ಕಾವ್ಯದಲ್ಲಿ ಉದಾತ್ತ ವಿಚಾರಗಳನ್ನು ತಮ್ಮ ಕೃತಿಯಮೂಲಕ ಪಡಿಮೂಡಿಸಿದ ಕುಮಾರನಿಜಗುಣರು ತಾವು ಕಂಡುಂಡ ಜೀವನದ ಅನುಭವಗಳನ್ನೇ ಕಾವ್ಯದ ಮುಖಾಂತರ ದರ್ಶಿಸಿದ್ದಾರೆ